# ಹಿಂಬಡ್ತಿ ಪಟ್ಟಿಯಲ್ಲಿ ಮತ್ತೆ 3 ಐಎಎಸ್ ಅಧಿಕಾರಿಗಳು

- ರಾಜೇಶ್ ರೈ ಚಟ್ಲ

10-6-19

ಬೆಂಗಳೂರು: 1998ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ನಡೆದ 'ಅಕ್ರಮ'ಗಳನ್ನು ಸಕ್ರಮಗೊಳಿಸಲು ಸಿದ್ಧಪಡಿಸಿದ ಸುಗ್ರೀವಾಜ್ಞೆ ರಾಜಭವನದ ಅಂಗಳ ತಲುಪಿದ ಬೆನ್ನಲ್ಲೆ, ಈ ಸಾಲಿನ ಆಯ್ಕೆ ಪಟ್ಟಿಯನ್ನು ಮತ್ತೊಮ್ಮೆ ಪರಿಷ್ಕರಿಸಿ ಕೆಪಿಎಸ್‌ಸಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ.

ಪರಿಷ್ಕೃತ ಪಟ್ಟಿಯಲ್ಲಿ ಸಹಾಯಕ ಆಯುಕ್ತ (ಎ.ಸಿ) ವೃಂದದಲ್ಲಿರುವ ನಾಲ್ವರು ಅಧಿಕಾರಿಗಳು, ಮತ್ತೊಮ್ಮೆ ಪಟ್ಟಿ ಪರಿಷ್ಕರಣೆಗೆ ಒಳಪಟ್ಟಿರುವುದರಿಂದ ಸ್ಥಾನಪಲ್ಲಟಗೊಳ್ಳಲಿದ್ದಾರೆ. ಈ ಪೈಕಿ, ಈಗಾಗಲೇ ಐಎಎಸ್‌ಗೆ ಬಡ್ತಿ ಪಡೆದ ಮೂವರು ಅಧಿಕಾರಿಗಳೂ ಇದ್ದಾರೆ. ಈ ಅಧಿಕಾರಿಗಳು ಹಿಂಬಡ್ತಿಗೆ ಒಳಗಾಗಬೇಕಿದೆ. ಆದರೆ, ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕಿದರೆ, ಈ ಅಧಿಕಾರಿಗಳೂ ಹಿಂಬಡ್ತಿಯ ತೂಗುಗತ್ತಿಯಿಂದ ರಕ್ಷಣೆ ಪಡೆಯಲಿದ್ದಾರೆ.

**ಮತ್ತೊಮ್ಮೆ ಪಟ್ಟಿ ಪರಿಷ್ಕರಣೆ:** 1998ರ ಸಾಲಿನ ಪ್ರಕರಣದಲ್ಲಿ ತೀರ್ಪು ನೀಡಿದ್ದ ಹೈಕೋರ್ಟ್, ಆಯ್ಕೆ ಪಟ್ಟಿಯಲ್ಲಿರುವ ಅನರ್ಹರನ್ನು ಕೈಬಿಡುವಂತೆ ತೀರ್ಪು ನೀಡಿತ್ತು. ಅಲ್ಲದೆ, 91 ಅಭ್ಯರ್ಥಿಗಳಉತ್ತರ ಪತ್ರಿಕೆಗಳ ಮರು ಮೌಲ್ಯ ಮಾಪನದ ಅಂಕ ಪರಿಗಣಿಸಿಪಟ್ಟಿ ಪರಿಷ್ಕರಿಸುವಂತೆಯೂ ನಿರ್ದೇಶಿಸಿತ್ತು.

ಮೊದಲ ಪರಿಷ್ಕೃತ ಪಟ್ಟಿಯ ಪ್ರಕಾರ, 28 ಅಧಿಕಾರಿಗಳು ಹುದ್ದೆ ಕಳೆದುಕೊಂಡು, ಹೊಸತಾಗಿ 28 ಅಧಿಕಾರಿಗಳು ನೇಮಕಾತಿ ಆದೇಶ ಪಡೆಯಲು ಅರ್ಹರಾಗುತ್ತಾರೆ. ಅಲ್ಲದೆ, 140 ಅಧಿಕಾರಿಗಳ ಹುದ್ದೆಗಳಲ್ಲಿ ಸ್ಥಾನಪಲ್ಲಟ ಉಂಟಾಗಲಿದ್ದು, ಈ ಪೈಕಿ, ಐಎಎಸ್‌ಗೆ ಬಡ್ತಿ ಪಡೆದ 7 ಅಧಿಕಾರಿಗಳೂ ಹಿಂಬಡ್ತಿ ಪಡೆಯುತ್ತಾರೆ ಎಂದು ವಿವರಿಸಲಾಗಿತ್ತು.

## ಹೈಕೋರ್ಟ್‌ನತ್ತ ಅಧಿಕಾರಿಗಳ ಚಿತ್ತ

2016ರ ಜೂನ್ 21ರಂದು ಹೈಕೋರ್ಟ್ ನೀಡಿದ್ದ ತೀರ್ಪು ಅನುಷ್ಠಾನಗೊಂಡಿಲ್ಲ ಎಂದು ಸಲ್ಲಿಕೆಯಾಗಿರುವ 'ನ್ಯಾಯಾಂಗ ನಿಂದನೆ' ಅರ್ಜಿಗಳ ವಿಚಾರಣೆ ಸೋಮವಾರ (ಜೂನ್ 10) ನಡೆಯಲಿದೆ. ಈ ಹಿಂದಿನ ವಿಚಾರಣೆ ವೇಳೆ (ಏ. 26), ಪರಿಷ್ಕೃತ ಪಟ್ಟಿಯ ಅನುಷ್ಠಾನಕ್ಕೆ ಬದ್ಧ ಎಂದು ಹೇಳಿದ್ದ ಸರ್ಕಾರ, ಸ್ಥಾನಪಲ್ಲಟಗೊಳ್ಳುವ ಅಧಿಕಾರಿಗಳ ಪಟ್ಟಿ ಸಮೇತ ಪ್ರಮಾಣ ಪತ್ರ ಸಲ್ಲಿಸಿತ್ತು.

ಇದೀಗ ನಿಲುವು ಬದಲಿಸಿರುವ ಸರ್ಕಾರ, ಸುಗೀವಾಜ್ಞೆ ವಿಷಯವನ್ನು ಪ್ರಮಾಣ ಪತ್ರದ ಮೂಲಕ ಕೋರ್ಟ್‌ಗೆ ಸಲ್ಲಿಸಲು ನಿರ್ಧರಿಸಿದೆ. ಸರ್ಕಾರದ ಈ ದ್ವಂದ್ವ ನಿಲುವು ಮತ್ತು ಇನ್ನೂ ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕದೇ ಇರುವುದರಿಂದ ನ್ಯಾಯಪೀಠ ಯಾವ ರೀತಿ ಸ್ಪಂದಿಸಬಹುದು ಎಂಬ ಕುತೂಹಲ ಮೂಡಿದೆ.